INDIAN JOURNAL OF HISTORY AND ARCHAEOLOGY
ISSN (e):2582-225Xwww.ijha.in
Vol-6, Issue -4, July--August, 2024,
PageNo,13- 20
Peer -Reviewed, Refereed Journal

# ಮದರಾಸು ಕರ್ನಾಟಕ ಪ್ರಾಂತ್ಯದಲ್ಲಿದ್ದ ವಸಾಹತುಶಾಹಿಯ ಅಭಿವೃದ್ಧಿ ಮಾದರಿ –ಒಂದು ಅವಲೋಕನ

**ಗುರುಪ್ರಸಾದ್.ವಿ.ಡಿ.**[1]

ಕ್ರಿ.ಶ.1600ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಮೂಲಕ ವ್ಯಾಪರದ ಉದ್ದೇಶದಿಂದ ಭಾರತಕ್ಕೆ ಆಗಮಿಸಿದ ಬ್ರಟಿಷರು ಇಲ್ಲಿನ ಸ್ಥಳೀಯ ರಾಜರ ಅಸಮರ್ಥತತೆಯನ್ನು ಬಳಸಿಕೊಂಡು ರಾಜಕೀಯವಾಗಿ ಒಂದೊಂದೆ ಪ್ರದೇಶವನ್ನು ವಶಪಡಿಸಿಕೊಳ್ಳುತ್ತಾ ಹೋದರು. ಆರಂಭದಲ್ಲಿ ಬ್ರಿಟಿಷರು ತಾವು ಗೆದ್ದ ಪ್ರದೇಶಗಳನ್ನು 3 ಪ್ರೆಸಿಡೆನ್ಸಿಗಳಾಗಿ ವಿಭಜಿಸಿ ಆಳ್ವಿಕೆ ಮಾಡತೊಡಗಿದರು. ಅವುಗಳಲ್ಲಿ ಮದ್ರಾಸ್ ಪ್ರೆಸಿಡೆನ್ಸಿಯು 1639 ರಲ್ಲಿ ಸ್ಥಾಪನೆಯಾದರೆ, ಬಾಂಬೆ ಪ್ರಸಿಡೆನ್ಸಿಯು 1668ರಲ್ಲಿ ಸ್ಥಾಪನೆಯಾಯಿತು. ಹಾಗೆಯೇ ಕಲ್ಕತ್ತ ಪ್ರೆಸಿಡೆನ್ಸಿಯು 1699ರಲ್ಲಿ ಸ್ಥಾಪನೆಯಾಯಿತು. ಈ ಪ್ರೆಸಿಡೆನ್ಸಿಗಳಲ್ಲಿ ಬ್ರಟಿಷರ ತಾವು ನೇಮಿಸಿದ ಕಲೆಕ್ಟರುಗಳ ಮೂಲಕ ಅಡಳಿತ ನಡೆಸುತ್ತಿದ್ದರು. ಕರ್ನಾಟಕದ ಕೆಲವು ಪ್ರದೇಶಗಳು ಮದ್ರಾಸ್ ಹಾಗೂ ಬಾಂಬೆ ಪ್ರೆಸಿಡೆನ್ಸಿಯ ಆಳ್ವಿಕೆಗೆ ಒಳಪಟ್ಟಿದ್ದವು. ಕರ್ನಾಟಕದ ಈಗಿನ ದಕ್ಷಿಣ ಕನ್ನಡ ಹಾಗೂ ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರೆಸಿಡೆನ್ಸಿಯ ಅಧೀನಕ್ಕೆ ಒಳಪಟ್ಟಿದ್ದವು. ಈ 2 ಜಿಲ್ಲೆಗಳು ವಿಭಿನ್ನ ಭೌಗೋಳಿಕ ಪರಿಸರವನ್ನು ಒಂದಿದ್ದು ಒಂದೆ ಆಳ್ವಿಕೆಗೆ ಒಳಪಟ್ಟಿದ್ದು ಬ್ರಿಟಿಷರ ಒಡೆದು ಆಳುವ ನೀತಿಗೆ ಕೈಗನ್ನಡಿಯಾಗಿದೆ. ಈ 2 ಜಿಲ್ಲೆಗಳಲ್ಲಿ ಯಾವ ರೀತಿಯ ಆರ್ಥಿಕ ನೀತಿಗಳು ಜಾರಿಯಲ್ಲಿದ್ದವು ಹಾಗೂ ಅಭಿವೃದ್ಧಿಯ ಮಾದರಿಗಳು ಹೇಗಿದ್ದವು ಎಂಬುದನ್ನು ಇಲ್ಲಿ ತಿಳಿಯಬಹುದಾಗಿದೆ.

19ನೇ ಶತಮಾನದ ಉದಯವು ಮೈಸೂರು ರಾಜ್ಯದ ಪತನದಿಂದಾಗಿ ದಕ್ಷಿಣಭಾರತದ ರಾಜಕೀಯ ಇತಿಹಾಸದಲ್ಲಿ ಒಂದು ಪ್ರಧಾನವಾದ ಬದಲಾವಣೆಯನ್ನು ಗುರುತಿಸಿತು ಶ್ರೀರಂಗಪಟ್ಟಣದ ಯುದ್ದದಲ್ಲಿ ಟೀಪು ಸುಲ್ತಾನನು ಮೃತನಾದ ಮೇಲೆ ಅವನ ರಾಜ್ಯವನ್ನು ಬ್ರಟೀಷರು ನಿಜಾಮ ಮತ್ತು ಪೇಶ್ವೆ ತಮ್ಮೊಳಗೆ ಹಂಚಿಕೊಂಡರು. ಫಲವತ್ತಾದ ಆಯಕಟ್ಟಿನ ಪ್ರದೇಶವಾದ ಕೆನರಾ ಪ್ರಾಂತ್ಯವು ಕರಾವಳಿಯ ಸಮೇತವಾಗಿ ಇಂಗ್ಲೀಷ್ ಈಸ್ಟ್ ಇಂಡಿಯಾ ಕಂಪನಿಯ ಕೈಸೇರಿತು. ಮಲಬಾರಿನ ನೆರೆಯ ಕೆನರಾದ ಅತ್ಯಂತ ದಕ್ಷಿಣಭಾಗವನ್ನೇ ಬೇರೆಯೇ ಒಂದು ಜಿಲ್ಲೆಯಾಗಿ ರೂಪಿಸಿ ದಕ್ಷಿಣಕನ್ನಡ (ಸೌತ್

[1].**ಸಂಶೋಧಕರು,ಇತಿಹಾಸ ಅಧ್ಯಯನ ವಿಭಾಗ,ಮೈಸೂರು ವಿಶ್ವವಿದ್ಯಾನಿಲಯ,ಮಾನಸ ಗಂಗೋತ್ರಿ,ಮೈಸೂರು**

ಕೆನರಾ) ಎಂದು ಕರೆದರು. ಅದರಲ್ಲಿ ಕೊರಿಯಾಲ್ (ಮಂಗಳೂರು), ಬೇಕಲ್ (ಕಾಸರಗೂಡು) ಮತ್ತು ನೀಲೇಶ್ವರಗಳು ಸೇರಿದ್ದವು. ಮೊದಲಬಾರಿಗೆ ಈ ಪ್ರದೇಶಗಳು ವಿದೇಶಿ ಚಕ್ರಾದಿಪತ್ಯಕ್ಕೆ ಸೇರಿದವು. ಹೆಚ್ಚುವರಿಯಾಗಿ ಹಿಂಡಿಕೊಳ್ಳುವ ವಸಾಹತುಶಾಹಿ ನೀತಿಯ ಅನುಭವ ಅವರಿಗೆ ಆಗತೊಡಗಿತು.[1] 1799ರಿಂದ ಕುಂದಾಪುರ ಉಡುಪಿ, ಮಂಗಳೂರು ಉಪ್ಪಿನಂಗಡಿ ಮತ್ತು ಕಾಸರಗೂಡು ತಾಲೂಕುಗಳನ್ನು ಒಳಗೊಂಡ ದಕ್ಷಿಣಕನ್ನಡ ಜಿಲ್ಲೆಯು ರೂಪುಗೊಳ್ಳುವವರೆಗೆ ಆ ಇಡೀ ಬ್ರಟಿಷ್ ಪ್ರದೇಶವನ್ನು ಕೆನರಾ ಪ್ರಾಂತ್ಯ ಎಂದು ಕರೆಯಲಾಗುತಿತ್ತು. ಕಂಪನಿಯು ಅದನ್ನು ವಶಪಡಿಸಿಕೊಂಡ ಕೂಡಲೇ ಕ್ಯಾಪ್ಟನ್ ಥಾಮಸ್ ಮನ್ರೋನನ್ನು ಸೆಟ್ಲ್‌ಮೆಂಟ್ ಅಧಿಕಾರಿಯಾಗಿ ಮತ್ತು ಕೆನರಾದ ಕಲೆಕ್ಟರ್ ನನ್ನಾಗಿ ನೇಮಕ ಮಾಡಲಾಯಿತು.

1799ರಲ್ಲಿ ಟೀಪು ಸುಲ್ತಾನನ ಮರಣದ ನಂತರ ಬಳ್ಳಾರಿ ಜಿಲ್ಲಾ ಪ್ರದೇಶವನ್ನು ಹೈದರಾಬಾದಿನ ನಿಜಾಮನಿಗೆ ವಹಿಸಲಾಯಿತು. ನಿಜಾಮ 1792ರಿಂದ 1799ರವರೆಗೆ ಬ್ರಟಿಷರ ಸಹಾಯಕ ಸೈನ್ಯಪದ್ದತಿಗೆ ಒಪ್ಪಿ ಸಹಿ ಮಾಡಿದ. ಸಹಿ ಹಾಕಿದ ನಂತರ ನಿಜಾಮ ಬಳ್ಳಾರಿ, ಅನಂತಪುರ, ಕಡಪಾ ಮತ್ತು ಕರ್ನೂಲು ಪ್ರದೇಶಗಳನ್ನು ದತ್ತಿಮಂಡಲವಾಗಿ ಬ್ರಿಟಿಷರಿಗೆ ಬಿಟ್ಟುಕೊಟ್ಟ. ಅಂದಿನಿಂದ ಬಳ್ಳಾರಿ ಪ್ರದೇಶ ಮದ್ರಾಸ್ ಅಧಿಪತ್ಯಕ್ಕೆ ಸೇರಿತ್ತು. ಈ ಜಿಲ್ಲೆ ರಚನೆಯಾಗಿ 1800ರಿಂದ ಕಲೆಕ್ಟರುಗಳ ಆಳ್ವಿಕೆ ಆರಂಭವಾಯಿತು. ಥಾಮಸ್ ಮನ್ರೋ ಮೊದಲ ಕಲೆಕ್ಟರ್ ಅಗಿ ಆಯ್ಕೆಯಾದ. 1800ರಿಂದ 1947ರವರೆಗೆ 147 ವರ್ಷಗಳ ಅವಧಿಯಲ್ಲಿ ಸುಮಾರು 112 ಜನ ಕಲೆಕ್ಟರುಗಳು ಆಳ್ವಿಕೆ ನಡಿಸಿದರು ನಂತರ 1953 ಅಕ್ಟೋಬರ್ 1ರಂದು ಬಳ್ಳಾರಿ ಜಿಲ್ಲೆ ಮೈಸೂರು ರಾಜ್ಯದಲ್ಲಿ ವಿಲೀನವಾಯಿತು.[2]

**ಮದ್ರಾಸ್ ಕರ್ನಾಟಕದ ಆರ್ಥಿಕ ನೀತಿ ಮತ್ತು ಅಭಿವೃದ್ಧಿ ಮಾದರಿ :**

ಪ್ರಸ್ತುತ ಅದ್ಯಯನದಲ್ಲಿ ಮದ್ರಾಸ್ ಪ್ರೆಸಿಡೆನ್ಸಿಗೆ ಸೇರಿದ್ದ ಕರ್ನಾಟಕದ 2 ಜಿಲ್ಲೆಗಳಾದ ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಗಳಲ್ಲಿ ವಸಾಹತುಶಾಹಿಯ ಆಢಳಿತವು ಯಾವ ರೀತಿಯ ಆರ್ಥಿಕ ನೀತಿಗಳನ್ನು ಜಾರಿಗೆ ತಂದಿತು ಹಾಗೂ ಅಲ್ಲಿನ ಅಭಿವೃದ್ಧಿಯು ಯಾವ ಮಟ್ಟದಲ್ಲಾಯಿತು ಎಂಬುದನ್ನು ತಿಳಿಯುವುದಾಗಿದೆ.

## ದಕ್ಷಿಣ ಕನ್ನಡ

ಕೆನರಾ ಪ್ರಾಂತ್ಯವು ಬ್ರಟಿಷರ ಆಳ್ವಿಕೆ ಒಳಗಾದ ನಂತರ 1862ರಲ್ಲಿ ಇದನ್ನು ವಿಭಜಿಸಿ ದಕ್ಷಿಣ ಕನ್ನಡವನ್ನು ಮದ್ರಾಸ್ ಪ್ರೆಸಿಡೆನ್ಸಿಗೂ, ಉತ್ತರ ಕನ್ನಡವನ್ನು ಬಾಂಬೆ ಪ್ರೆಸಿಡೆನ್ಸಿಗೂ ವಹಿಸಲಾಯಿತು. ಸೌತ್ ಕೆನರಾ ಜಿಲ್ಲೆಯಲ್ಲಿ ವಸಾಹತುಶಾಹಿಯ ಆಳ್ವಿಕೆಯ 1860ರ ನಂತರದ ಅವಧಿಯಲ್ಲಿ ಎಲ್ಲಾ ಸ್ಥರಗಳಲ್ಲೂ ವ್ಯಾಪಕವಾಗಿ ಪ್ರತಿಬಿಂಭಿಸಲ್ಪಟ್ಟಿತು. ಈ ಅವಧಿಯಲ್ಲಿ ಅನೇಕ ಭೂಸಂಬಂಧದ ಕಾಯ್ದೆಗಳನ್ನು ಜಾರಿಗೆ ತರಲಾಯಿತು. ಭೂಸರ್ವೆ ಮತ್ತು ಭೂಕಂದಾಯವನ್ನು ವೈಜ್ಞಾನಿಕವಾಗಿ ನಿಗದಿಗೊಳಿಸಿದೆ. ಆಧುನಿಕ

ಕಾರ್ಖಾನೆಗಳನ್ನು ಸ್ಥಾಪಿಸಲಾಯಿತು. ಮುಖ್ಯವಾಗಿ ಬಾಸೆಲ್ ಮಿಶನ್ ರವರ ಹೆಂಚು, ಗೇರುಬೀಜ, ಮುದ್ರಣಾಲಯ ಕಾಫಿ ಕ್ಯೂರಿಂಗ್ ಕೇಂದ್ರಗಳು ಸ್ಥಳೀಯರಿಗೆ ಹೆಚ್ಚು ಉದ್ಯೋಗವನ್ನು ನೀಡಲಾರಂಭಿಸಿತು.

**ಕಂದಾಯ ವ್ಯವಸ್ಥೆ**

ಮದ್ರಾಸ್ ಪ್ರಾಂತ್ಯದಲ್ಲಿ ಥಾಮಸ್ ಮನ್ರೋ ರೈತವಾರಿ ಪದ್ಧತಿಯನ್ನು ಜಾರಿಗೆ ತಂದನು. ಶಿಸ್ತು ಅಥವಾ ಕೊಡುಗೆಯ ರೂಪದ ಮಾಮೂಲು ಭೂಕಂದಾಯದ ಜೊತೆಗೆ, ಮೈಸೂರು ಸರ್ಕಾರವು ನಿಗದಿಪಡಿಸಿದ ಶಮೀಲ್ ಎನಿಸಿಕೊಳುವ ತೆರಿಗೆಯೂ ಸೇರಿತ್ತು. ಇವೆರಡನ್ನೂ ಮನ್ರೋ ಪದೇ ಪದೇ ಸಂಭವಿಸಿದ ಮೈಸೂರು ಯುದ್ಧಗಳಿಂದಾಗಿ ಪಾಳುಬಿದ್ದ ಕೃಷಿಭೂಮಿಯನ್ನು ಬಿಡದೆ ಬಲಾತ್ಕಾರವಾಗಿ ವಸೂಲು ಮಾಡಿದನು[3] ಮನ್ರೋ ಈ ಭಾಗದಲ್ಲಿ ಜಾರಿಗೆ ತಂದ ರೈತವಾರಿ ಭೂಕಂದಾಯ ನೀತಿಯೂ ಸ್ಥಳೀಯ ರೈತರಿಂದ ತೀವ್ರವಾಗಿ ವಿರೋದಕ್ಕೇ ಒಳಗಾದುದರಿಂದ 1817ರಲ್ಲಿ ಸರಾಸರಿ ಅಥವಾ ತರಾವೋ ಪದ್ದತಿಯನ್ನು ಜಾರಿಗೆ ತರಲಾಯಿತು. ಕರ್ನಲ್ ರೀಡ್‌ನ ಕಂದಾಯ ನೀತಿಯನ್ನು ಮನ್ರೋ ತನ್ನ ಕಂದಾಯ ವ್ಯವಸ್ಥೆಯ 'ಖಚಿತವಾದುದು' ಮತ್ತು ಖಾಯಂ ಆದುದು ಎಂದು ನಿರ್ಣಯಿಸಿದನು. ವಿದ್ವಾಂಸರೊಬ್ಬರು ಇದರ ಮೇಲೆ ಹೀಗೆ ಅಭಿಪ್ರಾಯ ಪಟ್ಟರು " ಈ ವ್ಯವಸ್ಥೆಯ ವಿಶಿಷ್ಟ ಲಕ್ಷಣವೆಂದರೆ ಸರ್ಕಾರವು ಭೂಮಾಲಿಕನೊಂದಿಗೆ ನೇರ ಸಂಪರ್ಕಕ್ಕೆ ಬರುತ್ತದೆ ತನ್ನ ನೌಕರರ ಮೂಲಕವಾಗಿಯೇ ತನ್ನ ವರಮಾನವನ್ನು ವಸೂಲು ಮಾಡುತ್ತದೆ. ಜಮೀನ್ದಾರರಂತಹ ಮದ್ಯವರ್ತಿಯ ಅಗತ್ಯ ಅಲ್ಲಿ ಇಲ್ಲ ಮತ್ತು ಇದರ ಉದ್ದೇಶ ಉಳುವ ರೈತಾಪಿ ಭೂಮಾಲೀಕರನ್ನು ಸೃಷ್ಟಿಸುವುದು.[4]

ಕೆನರಾ ಪ್ರಾಂತ್ಯದಲ್ಲಿ ಇಡೀ ಕಂದಾಯ ವ್ಯವಸ್ಥೆಯನ್ನು ವಿನೂತನ ಪ್ರಯೋಗಗಳಿಗೆ ಒಳಪಡಿಸಲಾಯಿತು. ಒಂದೇ ಬಗೆಯ ಜಮೀನು ಹೊಂದಿರುವ ಜಮೀನುದಾರರ ತೆರಿಗೆ ನಿಗದಿಯಲ್ಲಿ ಪಕ್ಷಪಾತವಿರುತಿತ್ತು. ಕೆಲವರಿಗೆ ಅಧಿಕ ಭಾರದ ತೆರಿಗೆ, ಮತ್ತೆ ಕೆಲವರಿಗೆ ಬಹಳ ಹಗುರವಾದ ತೆರಿಗೆ. ಹೆಚ್ಚು ತೆರಿಗೆ ನೀಡಬೇಕಾದವರಿಗೆ ಭೂಮೌಲ್ಯ ಅಥವಾ ಗೇಣಿ ಮೌಲ್ಯ ಸೂಕ್ತವಾಗಿರಲಿಲ್ಲ. ಅಧಿಕಾರಿಗಳು ನಿಗದಿಯನ್ನು ಏಕರೂಪಗೊಳಿಸಲು ಪ್ರಯತ್ನ ಪಡುವುದು ವಿಫಲವಾಯಿತು. ಏಕೆಂದರೆ ನೆಲವನ್ನು ಸರ್ವೆ ಮಾಡಿರಲಿಲ್ಲ. ಅಲ್ಲದೇ ಶ್ರೀಮಂತರೂ ಪ್ರಭಾವಶಾಲಿಗಳೂ ಆದವರು ಆ ಅಸಮಾನತೆಗಳನ್ನು ಹಾಗೆಯೇ ಉಳಿಸಲು ಶಕ್ತಿಮೀರಿ ಶ್ರಮಿಸುತ್ತಿದ್ದರು. ಕೆಲವು ಬಂಜರು ಭೂಮಿಗಳು ತೆರಿಗೆ ಪಾವತಿ ಮಾಡಲು ಸಾದ್ಯವಾಗದೇ ಹಾಗೆಯೇ ಬೀಳುಬಿದ್ದವು. ಕಂದಾಯ ಪದ್ದತಿಯು ಹೆಚ್ಚಾಗಿ ಸಂಪ್ರದಾಯದ ಬೀಜವರಿಯನ್ನು ಆಧರಿಸಿತ್ತು.[5] ಸರಕಾರದ ಪಾಲನ್ನು ತುಂಬಾ ಹೆಚ್ಚಾಗಿ ನಿಗದಿ ಮಾಡಿದುದರಿಂದಾಗಿ ಈ ಅತಿರೇಕದ ದರ ಕಾರಣವಾಗಿ ವಸೂಲಿಯ ಒತ್ತಡವೂ ಹೆಚ್ಚಿ ಉತ್ಪಾದನೆಯ ಏಮೌಲ್ಯದಲ್ಲಿ ಕುಸಿತ ಉಂಟಾಯಿತು. ಕಂಪನಿಯು ಕೆನರಾದ ಪೂರ್ತಿ ಜಮಾವನ್ನು ತಕ್ಷಣವೇ ವಸೂಲಿ ಮಾಡಿ ಈಚಿನ

ಯುದ್ಧಗಳಿಂದ ಆಗಿರುವ ನಷ್ಟವನ್ನು ತುಂಬಿಕೊಳ್ಳಬೇಕೆಂದು ಬಯಸಿತು ಹಾಗಾಗಿ ಗೋಜಲುಗಳು ಇನ್ನು ಹೆಚ್ಚಾದವು. ಕೆಲವು ರೈತರು ಒಟ್ಟು ಉತ್ಪನ್ನದ ಶೇ 60ಕ್ಕೂ ಹೆಚ್ಚಾದ ಈ ನಿಗದಿಯನ್ನು ಒಪ್ಪದೆ ಕಂದಾಯ ಕೊಡಲು ನಿರಾಕರಿಸಿದರು. ರೈತರಲ್ಲಿ ಕರನಿರಾಕರಣ ಪ್ರಚಾರದ ಒಲವೂ ಕಂಡುಬಂದಿತ್ತು.

ಕೆನರಾದಲ್ಲಿ ಕೃಷಿಯು ಅಭಿವೃದ್ಧಿಗೊಳ್ಳುತ್ತಿದೆ ಎಂದು ಆಡಳಿತವು ಪದೇ ಪದೇ ವರದಿ ಮಾಡುತ್ತಿದ್ದರೂ, 1830ರವೇಳೆಗೆ ವರ್ಗದಾರರು ಮತ್ತು ರೈತರು ದಕ್ಷಿಣವಲಯದ ಬೇಕಲ ತಾಲೂಕಿನಲ್ಲಿ ಕಂಪನಿಯು ಜಾರಿಗೊಳಿಸಿದ ಕಂದಾಯ ಪದ್ಧತಿಯ ವಿರುದ್ಧವಾಗಿ ವ್ಯವಸ್ಥಿತವಾದ ಪ್ರತಿಭಟನೆಯನ್ನು ವ್ಯಕ್ತಪಡಿಸಲು ಪ್ರಯತ್ನಿಸಿದರು. ಪಾರಂಪರಿಕವಾಗಿ ಬಂದ ಗ್ರಾಮ ಸಭೆಗಳಾದ ನಾಟ್ಟುಕೂಟ್ಟಂಗಳು ಬ್ರಿಟಿಷರ ವಿರುದ್ದವಾಗಿ ಪ್ರತಿಕ್ರಯಿಸಿದವು. ಕುಂಬ್ಳ, ಮೋಗಾಲ್ ಕಾಸರಗೂಡು, ಅಂಗಡಿ ಮೊಗುರು ಮತ್ತು ಪಾಡಿಗಳ ವರ್ಗದಾರರು ಮತ್ತು ಪಟೇಲರು 1830ರ ನವಂಬರ್ 16ರಂದು ಒಂದು ಸಭೆ ಅಥವಾ ಕೂಟ್ಟು ನಡೆಸಿದರು. ಕಂಪನಿಯ ಕ್ರಮವನ್ನು ಪ್ರತಿಭಟಿಸಲು ಮಧೂರು ಮತ್ತು ವೋಕಾರ್ಡಿಗಳಲ್ಲೂ ಅಂಥವೇ ಕೂಟುಗಳು ನಡೆದವು.[6]

ಕಂದಾಯ ನಿಗದಿಯನ್ನು ಆಗಿಂದಾಗೆ ಸಾಮಾನ್ಯವಾಗಿ 30ವರ್ಷಗಳಿಗೆ ಒಮ್ಮೆ ಕೈಗೊಳ್ಳತಕ್ಕದ್ದು ಎಂದು ನಿರ್ಣಯಿಸಲಾಯಿತು. ದಕ್ಷಿಣಕನ್ನಡದ ರೆವಿನ್ಯೂ ಸರ್ವೆ 1886ರಲ್ಲಿ ಪ್ರಾರಂಭವಾಗಿ 1896ರ ವೇಳೆಗೆ ಮುಗಿಯಿತು. ಸರ್ವೆಯ ಕನಿಷ್ಟ ಘಟಕವಾಗಿ ಅಂಗೀಕೃತವಾಗಿದ್ದ ವರ್ಗ ಎಷ್ಟು ಸಂದರ್ಭಗಳಲ್ಲಿ ಒಡೆತನದ ಘಟಕಗಳಾಗಿ ಪರಿವರ್ತಿತವಾಗಿ ಬಿಟ್ಟಿದ್ದವು. ಒಂದೇ ಸರ್ವೆ ಕ್ಷೇತ್ರದಲ್ಲಿ ತರಿ, ಕುಷ್ಕಿ ಮತ್ತು ತೋಟ ಈ ಮೂರುಬಗೆಯ ತಾಕುಗಳನ್ನು ಒಳಗೊಂಡಿತ್ತು ಆದ್ದರಿಂದ 1894ರಲ್ಲಿ ಪೂರಕ ಸರ್ವೆಗಳನ್ನು ಕೈಗೊಳ್ಳಲಾಯಿತು. ಈ ಕೆಲಸದ ಹಿಂದೆಯೇ ಮಣ್ಣಿನ ವರ್ಗೀಕರಣ ಹಾಗೂ ಬಾಗಾಯಿತು ಅಥವಾ ತೋಟಗಳಲ್ಲಿ ಇರವ ಮರಗಳ ಎಣಿಕೆ ಕೂಡ ನಡೆಯಿತು. ಕಂದಾಯದ ನಿಗದಿಗೆ ಮುಂಚಿತವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಆದಾಯವು 1419586 ರೂಪಯಿಗಳು. ಈಗ ಹೊಸ ನಿಗದಿಯಂತೆ ಜಿಲ್ಲೆಯ ಕಂದಾಯ ವರಮಾನವು 2341260 ರೂಪಾಯಿ ಆಯಿತು. ಕಂದಾಯವು ಏರಿದ್ದರಿಂದ ಸಹಜವಾಗಿಯೇ ಗೇಣಿದಾರರು ಕೊಡಬೇಕಾದ ಗೇಣಿಯ ಮೊತ್ತವು ಏರಿತು ಮುಂದೆ ಸರಕಾರವು ಮೂಲಗೇಣಿರೆಂಟ್ ಎನಾನ್ಸ್‌ಮೆಂಟ್ ಆಕ್ಟ್ 1920 ಶಾಸನವನ್ನು ಜಾರಿಗೊಳಿಸಿ ಗೇಣಿದಾರರಿಂದ ಹೆಚ್ಚಿದ ಗೇಣಿಯನ್ನು ಪಡೆದುಕೊಳ್ಳಲು ಸೌಲಭ್ಯವನ್ನು ಕಲ್ಪಿಸಿತು.[7]

ದಕ್ಷಿಣ ಕನ್ನಡವನ್ನು ಬ್ರಿಟಿಷರು ಆಕ್ರಮಿಸಿಕೊಂಡ ಒಂದು ಶತಮಾನದ ಒಳಗಾಗಿ ಅಲ್ಲಿಯ ಕೃಷಿ ಉತ್ಪಾದನೆಯ ಪ್ರಧಾನ ಪಾಲನ್ನು, ಒಟ್ಟು ಉತ್ಪಾದನೆಯ ಶೇ50ಕ್ಕಿಂತಲೂ ಹೆಚ್ಚು ಬಾಗವನ್ನು ಸರಕಾರದ ಕಂದಾಯವಾಗಿ ಕಿತ್ತುಕೊಳ್ಳುತ್ತಿತ್ತು ಹಲವಾರು ತತ್ವಗಳು ಮತ್ತು ಕಾರ್ಯವಿಧಾನಗಳ ಮೂಲಕ ವಸಾಹತು ಸರಕಾರವೂ ಈ ಪ್ರದೇಶವನ್ನು ವಹಿಸಿಕೊಂಡಾಗಿನಿಂದಲೂ ಈ ಗುರಿಯನ್ನೇ ಗಮನದಲ್ಲಿ

ಇಟ್ಟುಕೊಂಡಿತ್ತು. ಈ ಅಂತಿಮ ಗುರಿಯನ್ನು ಸಾಧಿಸಲು ಅವರು ಹಲವಾರು ಪ್ರಯೋಗಗಳನ್ನು ನಡೆಸಿದರು.ದಕ್ಷಿಣಕನ್ನಡ ಜಿಲ್ಲೆಗೆ ಅತ್ಯಧಿಕ ಕರಭಾರವನ್ನು ಹೇರಿದರು. ಹೀಗೆ ತೆರಿಗೆಯನ್ನು ಅತಿಯಾಗಿ ಹೆಚ್ಚಿಸಿದ್ದು ಭಾರತದಂತಹ ವಸಾಹತುದೇಶಗಳಲ್ಲಿ ನೂತನ ಚಕ್ರಾಧಿಪತ್ಯಾಡಳಿತದ ಒಂದು ಹಂತವನ್ನು ಪ್ರತಿನಿಧಿಸಿತು. 20ನೇ ಶತಮಾನದಲ್ಲಿ ಇಂಥದೊಂದು ಶೋಷಕ ಅರ್ಥವ್ಯವಸ್ಥೆಯು ರೈತರಲ್ಲಿ ರಾಷ್ಟ್ರೀಯತೆಯ ಭಾವನೆಗೆ ದನಿಯು ದೊರಕುವಂತೆ ಮಾಡಿ ಸ್ವಾತಂತ್ರ್ಯ ಹೋರಾಟಕ್ಕೆ ಪೂರ್ವಭಾವಿಯಾಗಿ ಅದು ವಸಾಹತು ಸರಕಾರದ ವಿರುದ್ಧ ರೈತ ಹೋರಾಟಗಳಿಗೆ ನಾಂದಿಯಾಯಿತು.

**ಕೃಷಿ ಮತ್ತು ಭೂಸಂಬಂಧಿತ ಕಾಯ್ದೆಗಳು**

ನೆಲವನ್ನು ಅನುವಂಶಿಕವಾಗಿ ಪಡೆದು ಅನುಭೋಗಿಸುವ ಹಕ್ಕನ್ನು ದಕ್ಷಿಣಕನ್ನಡ ಜಿಲ್ಲೆಯಲ್ಲಿ ವರ್ಗ ಎಂದು ಕರೆಯಲಾಗಿದೆ.ಅದು ಪ್ರತ್ಯೇಕವಾದ, ಸ್ವತಂತ್ರವಾದ ಆಸ್ತಿಯಾಗಿರುವ ಭೂಮಿ ಎಂದು ಇದರ ಅರ್ಥ. ಇದು ಕೆನರಾದ ಭೂಮಾಲೀಕರಿಗೆ ಬಂದಿದ್ದ ಮೊದಲನೆಯ ಮತ್ತು ಅವರಿಗೇ ವಿಶಿಷ್ಟವಾದ ಹಕ್ಕು. ಭೂಮಿಯ ಮೇಲಿನ ಮೂಲಹಕ್ಕು ಇದ್ದುದರಿಂದ ಆ ಹಿಡುವಳಿಯನ್ನು ಮೂಲವರ್ಗವೆಂದು, ಹಿಡುವಳಿದಾರನನ್ನು ವರ್ಗದಾರನೆಂದೂ ಕರೆಯಲಾಗುತಿತ್ತು.[8] ದಕ್ಷಿಣ ಕನ್ನಡ ಜಿಲ್ಲೆಯು ತಂಬಾಕು ಬೆಳೆಗೆ ಹೆಚ್ಚಿನ ಆದ್ಯತೆ ನೀಡಿತು. 1804ರಲ್ಲಿ ತಂಬಾಕು ಬೆಳೆಯನ್ನು ಸರ್ಕಾರಿ ಏಕಸ್ವಾಮ್ಯದ ಒಳಗೆ ತರಲಾಯ್ತು. ಈ ಕಾನೂನಿನಂತೆ ರೈತ ತಂಬಾಕು ಕೃಷಿ ಮಾಡಲು ಸಂಬಂಧಪಟ್ಟ ತಹಶೀಲ್ದಾರರಿಂದ ಪರವಾನಿಗೆಯನ್ನು ಪಡೆದುಕೊಳ್ಳಬೇಕು. ಬೆಳೆದ ತಂಬಾಕನ್ನು ನಿಗದಿತ ವ್ಯಕ್ತಿಗೆ ರಶೀದಿ ಪಡೆದು ಮಾರಾಟ ಮಾಡಬೇಕು. 1853ರವರೆಗೆ ಸರ್ಕಾರ ತಂಬಾಕು ಬೆಳೆಯ ಏಕಸ್ವಾಮ್ಯವನ್ನು ತನ್ನಲ್ಲೇ ಇಟ್ಟುಕೊಂಡಿತು.[9] 1882ರಲ್ಲಿ ಮದ್ರಾಸ್ ಪ್ರಾಂತ್ಯದಲ್ಲಿ ಸರ್ಕಾರಿ ಕೃಷಿ ಇಲಾಖೆಯನ್ನು ಸ್ಥಾಪಿಸಲಾಯಿತು. ಹಾಗೂ ಇಲಾಖೆಗೆ ಗ್ರಾಮದ ಭೂದಾಖಲೆಗಳನ್ನು ಕಾಪಾಡಿಕೊಳ್ಳುವ ಅಧಿಕಾರ ನೀಡಲಾಯ್ತು.

ಇಲ್ಲಿನ ಮುಖ್ಯ ಕಸುಬು ಕೃಷಿ. ಕೃಷಿಯಲ್ಲಿ ಭೂಮಾಲೀಕತ್ವಕ್ಕೆ ಸಂಬಂಧಿಸಿದಂತೆ ವಸಾಹತು ಸರ್ಕಾರವು ಅನೇಕ ಬಗೆಯ ಬದಲಾವಣೆಗಳನ್ನು ಜಾರಿಗೊಳಿಸಿತು. ವಸಾಹತು ಸರ್ಕಾರಕ್ಕೆ ಕೃಷಿಯು ಕೇವಲ ಕಂದಾಯ ತರುವ ಮೂಲವಾಗಿತ್ತು. ಗೋದಾವರಿ ಮತ್ತು ಕೃಷ್ಣಾ ನದಿ ನೀರಾವರಿಯಿಂದ ರೈತರ ಆದಾಯ ಏರಿಕೆಯಾಗುತಿತ್ತು. ಥಾಮಸ್ ಮನ್ರೋ ಇಲ್ಲಿ ರೈತಾಪಿ ಭೂಮಾಲೀಕತ್ವವನ್ನು ಜಾರಿಗೊಳಿಸಿ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿದನು.

ಕೃಷಿ ಪ್ರಧಾನವಾಗಿದ್ದ ಜಿಲ್ಲೆ ಕೃಷಿಯಿಂದಾಗಿ ಎಷ್ಟು ಅಭಿವೃದ್ಧಿಯಾಯಿತು ಎಂಬುದು ಒಂದು ವಿಕಟಪ್ರಶ್ನೆ ಸಾಕಷ್ಟು ದಾರಾಳವಾಗಿ ಇಲ್ಲಿ ಮಳೆ ಬೀಳುವ ವರವಿದ್ದರೂ ಅದರ ಹೆಚ್ಚುಭಾಗ ಸಮುದ್ರಪಾಲಾಗುವ ಯೋಗ ಅದಕ್ಕೆ ಭೂಸವೆತ ಹಾಗೂ ನೀರಾವರಿಗೆ ಅನುಕೂಲವಲ್ಲದ ಸನ್ನಿವೇಶವೂ ಇಲ್ಲಿಯ ಕೃಷಿಯನ್ನು ಲಾಭದಾಯಕವನ್ನಾಗಿ ಮಾಡಲಿಲ್ಲ ಇಲ್ಲಿಯ ಬಂದರುಗಳು, ರೇವು ಪಟ್ಟಣಗಳು

ಅಕ್ಕಿಯನ್ನು ರಫ್ತು ಮಾಡುವ ಉಲ್ಲೇಖಗಳು ಇತಿಹಾಸದಲ್ಲಿ ಧಾರಾಳ ಇವೆ ಅದರ ಬಗ್ಗೆ ಇತಿಹಾಸಕಾರರು ಸಾಕಷ್ಟು ವಿವರವಾಗಿ ಉತ್ಸಾಹದಿಂದ ಬರೆದಿದ್ದಾರೆ ಆದರೆ ಇಲ್ಲಿಯ ರಫ್ತುಗಳಲ್ಲಿ ಇಲ್ಲಿ ಬೆಳೆದ ಅಕ್ಕಿಯ ಪಾಲು ಎಷ್ಟು ಎಂಬುದನ್ನು ಚರ್ಚಿಸಿದ್ದಾರೆ. ಘಟ್ಟದ ಮೇಲೆ ಬೆಳೆದ ಅಕ್ಕಿ ಕೃಷಿ ಉತ್ಪನ್ನಗಳು ಜಿಲ್ಲೆಗೆ ಬಂದು ಇಲ್ಲಿಯ ರೇವುಗಳಿಂದ ಅವುಗಳು ರಫ್ತಾಗುತಿತ್ತು. ಇಲ್ಲಿ ವರ್ತಕರ ಕಾರ್ಯವ್ಯಾಪ್ತಿ ಹೆಚ್ಚಿತ್ತು. ಸಾಗರಾಂತರ ವಾಣಿಜ್ಯವು ಇಲ್ಲಿ ಬೆಳೆದು ಬಂದ ಕಾರಣ ಇಲ್ಲಿ ವಣಿಕ ವರ್ಗದಲ್ಲಿ ಪರದೇಶದವರೂ ಭಾರತದ ಇತರ ಪ್ರದೇಶದಿಂದ ಬಂದವರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಇಲ್ಲಿಯ ಬೇಸಾಯವು ಇಲ್ಲಿಯ ಜನಸಂಖ್ಯೆಯನ್ನು  ಸರಿಯಾಗಿ ಸಾಕುವ ಶಕ್ತಿಯನ್ನು ಹೊಂದದ ಕಾರಣ ಇಲ್ಲಿಯ ಜನರಿಗೆ ವಾಣಿಜ್ಯದ  ಒಲವು ಸಂದರ್ಭಾನುಸಾರವಾಗಿ ಒದಗಿ ಬಂದ ಕಾರಣ ಇಲ್ಲಿ ಆಧುನಿಕ ಉದ್ದಿಮೆಗಳನ್ನು ವಸಾಹತುಶಕ್ತಿಯು ಮುಕ್ತವಾಗಿ ಬೆಳೆಯಗೊಡದ ಕಾರಣ ಇಲ್ಲಿಯ ಜನ ಉದ್ಯೋಗನಿಮಿತ್ತ ಬೇರೆ ಊರುಗಳಿಗೆ ಕ್ರಮೇಣ ಬೇರೆ ದೇಶಗಳಿಗೆ ವಲಸೆ ಹೋಗಿ ಹೊಟ್ಟೆಹೊರೆಯಬೇಕಾದ ಸಂದರ್ಭಗಳು, ಅವುಗಳನ್ನು ಎದುರಿಸಿ ಗೆಲ್ಲಬೇಕಾದ ಪ್ರಸಂಗಗಳು ಸೃಷ್ಟಿಯಾದವು.[10]

## ಬಳ್ಳಾರಿ

ಮದ್ರಾಸ್ ಕರ್ನಾಟಕದ ಆಡಳಿತ ಘಟಕದಲ್ಲಿ ದಕ್ಷಿಣ ಕನ್ನಡ , ಬಳ್ಳಾರಿ ಜಿಲ್ಲೆಗಳು ಸೇರಿದ್ದವು. ಬ್ರಿಟಿಷರು ರಾಯಲಸೀಮೆಯನ್ನು ಗೆದ್ದಾಗ ಬಳ್ಳಾರಿ ಜಿಲ್ಲೆ ಅವರ ಅಧೀನಕ್ಕೆ 1800ರಲ್ಲಿ ಬಂದಿತು. ಅಂದರೆ ನಿಜಾಮನು ಬಳ್ಳಾರಿಯನ್ನು ಬ್ರಿಟಿಷರಿಗೆ ಬಿಟ್ಟುಕೊಟ್ಟಿದ್ದನು. ಅಂದಿನಿಂದ ಅದು ಮದ್ರಾಸ್ ಪ್ರೆಸಿಡೆನ್ಸಿ ಅಧೀನಕ್ಕೆ ಬಂದಿತು ಇದು ಮದ್ರಾಸ್ ನಿಂದ 307 ಮೈಲಿ ದೂರದಲ್ಲಿ ಇದ್ದುದನ್ನು ಗಮನಿಸಬಹುದು. ಬ್ರಿಟಿಷ್ ವಸಾಹತುಶಾಹಿ ಮೂಸೆಯಿಂದ ಬಂದ 'ಕಂಟೋನ್ಮೆಂಟ್' ಪರಿಕಲ್ಪನೆ ಈ ಮದ್ರಾಸ್ ಕರ್ನಾಟಕಕ್ಕೂ ಅಂಟಿಕೊಂಡಿತ್ತು. ಅಂದು ಕಂಟೋನ್ಮೆಂಟ್ ಕರ್ನಾಟಕ ಎಂದು ಕರೆಯಲಾಗುತ್ತಿದ್ದ ಈ ಘಟಕ ಬ್ರಿಟಿಷರ ನೇರ ಹಿಡಿತಕ್ಕೆ ಒಳಗಾಗಿತ್ತು. ಏಕೆಂದರೆ ಇಂಥ ಕಂಟೋನ್ಮೆಂಟ್ ಏರಿಯಾಗಳಲ್ಲಿ ಬ್ರಿಟಿಷರು ತಮ್ಮ ಮಿಲಿಟರಿ ವ್ಯವಸ್ಥೆಯನ್ನು ಇಟ್ಟುಕೊಂಡಿದ್ದರಿಂದ ಈ ಹಿನ್ನೆಲೆಯಲ್ಲಿಯೇ ಬೆಳಗಾವಿ, ಬೆಂಗಳೂರು, ಬಳ್ಳಾರಿಗಳು ಇಂದಿಗೂ 'ದಂಡು ಪ್ರದೇಶ' ಗಳೆಂದು ಕರೆಸಿಕೊಳ್ಳುವ ನಗರಗಳಾಗಿವೆ.

ಬಳ್ಳಾರಿ ಪಟ್ಟಣವನ್ನು ಬರಗಾಲ ಜಿಲ್ಲೆಗಳ ರಾಜಧಾನಿ ಎಂದು 1880ರ ದಶಕದಲ್ಲಿ ಒಬ್ಬ ಆಗಂತುಕ ಚಿತ್ರಿಸಿದ್ದ. ತೆಲಗು–ಕನ್ನಡ ಭಾಷಿಕರು ಕೈಕುಲುಕಬಹುದಾದ ಪ್ರದೇಶ ಇದಾಗಿದ್ದು ಬ್ರಿಟಿಷರಿಗೆ ಇದು ದೊಡ್ಡ ದಂಡುನಗರವಾಗಿತ್ತು. ಬಳ್ಳಾರಿಯ ಕಪ್ಪು ಕಠಿಣ ಮಣ್ಣು ಆಹಾರ ಧಾನ್ಯಗಳನ್ನು ಬೆಳೆಯಲು ಅನುಕೂಲವಲ್ಲದಿದ್ದರೂ ಹತ್ತಿ ಬೆಳೆಗೆ ಸೂಕ್ತವಾಗಿತ್ತು. ಇದು ಹುಬ್ಬಳ್ಳಿ ಕಾರವಾರ ಮಾರ್ಗವಾಗಿ ಮುಂಬಯಿಗೆ ರವಾನೆಯಾಗುತ್ತಿದ್ದರೂ ಅದರ ಹೆಚ್ಚು ಬಳಕೆಯಾದುದು ಸ್ಥಳೀಯ ಕೈಮಗ್ಗಗಳಲ್ಲಿ ಹತ್ತಿಯಿಂದ ನೂಲನ್ನು ತೆಗೆಯುವ ಉದ್ಯೋಗವು ಗುಡಿಕೈಗಾರಿಕೆಯಾಗಿ ಅದು ಬಳ್ಳಾರಿಯ ರೈತಾಪಿ

ಜನರಬದುಕಿಗೆ ನೆರವಾಯಿತು. ಅವರ ಆದಾಯದ 1/3ರಷ್ಟು ಅಂಶ ನೂಲುವಿಕೆಯಿಂದ ಬರಿತಿತ್ತು ಎಂದು ಅಂದಾಜು ಮಾಡಲಾಗಿದೆ. ಆದರೆ ಮುಂದಿನ ದಶಕಗಳಲ್ಲಿ ಬ್ರಿಟನ್ನಿನಲ್ಲಿ ಕೈಗಾರಿಕಾ ಕ್ರಾಂತಿಯಾಗಿ ಅಲ್ಲಿಯ ಫ್ಯಾಕ್ಟರಿಗಳಿಂದ ದೊಡ್ಡ ಪ್ರಮಾಣದಲ್ಲಿ ಭಾರತಕ್ಕೆ ಹತ್ತಿ ಬಟ್ಟೆಯು ಬರತೊಡಗಿದ್ದು ಇಲ್ಲಿಯ ಕೈಮಗ್ಗಗಳಿಗೆ ಸವಾಲಾಗತೊಡಗಿತು. ಅವುಗಳು ಕೆಲವು ನಾವಿನ್ಯಗಳನ್ನು ಅರಸತೊಡಗಿದರೂ ಯಂತ್ರಪ್ರಣೀತ ವಿಲಾಯಿತಿಬಟ್ಟೆಯ ಸವಾಲನ್ನು ಎದುರಿಸಲಾಗದೆ ಸೊರಗತೊಡಗಿದವು ಇಷ್ಟಾದರೂ 1869–70ರಲ್ಲಿ ಬಳ್ಳಾರಿಯಲ್ಲಿ 23293 ಕೈಮಗ್ಗಗಳಿದ್ದವು ಎಂದು ಬ್ರಿಟಿಷ್ ಅಧಿಕಾರಿಗಳು ತಿಳಿಸಿದ್ದಾರೆ. ಜೊತೆಗೆ ಬರ, ಕ್ಷಾಮಗಳು ಹಾಗೂ ಡಕಾಯಿತಿಗಳು ಹೆಚ್ಚಾದವು. ಬ್ರಿಟಿಷರ ಇಲ್ಲಿನ ಆಳ್ವಿಕೆ ಇತರ ದೇಶೀಯ ರಾಜರಿಗೆ ಮಾದರಿ ಎನ್ನುವಂತ ಯಾವ ಲಕ್ಷಣವೂ ಬಳ್ಳಾರಿ ಅನುಭವಿಸಿದ ಗತಿಯಲ್ಲಿ ಕಾಣಸಿಗುವುದಿಲ್ಲ. ಮುಂದೆ ಅದು ಗಣಿಗಾರಿಕಾ ಕೇಂದ್ರವಾಗಿ ಬದಲಾಯಿತು.[11]

ಒಂದು ಕಡೆ ವಸಾಹತು ಸರ್ಕಾರದ ನೀತಿಗಳು ಕೃಷಿಯ ಮೇಲೆ ಮತ್ತು ಸಂಪ್ರದಾಯಿಕ ವೃತ್ತಿಗಳ ಮೇಲೆ ದುಷ್ಪರಿಣಾಮ ಉಂಟಾಯಿತು. ಆದರೆ ಬ್ರಿಟಿಷ್ ಆಡಳಿತ ಫಲವಾಗಿ ಶಿಕ್ಷಣವು ಸಮಾಜದ ಕೆಳಸ್ತರದವರಿಗೂ ದೊರೆಯತೊಡಗಿತು. 1863 ರಲ್ಲಿ ಮದರಾಸು ಪ್ರಾಂತ್ಯದಲ್ಲಿ "ದಿ ಮದರಾಸ್ ಎಜುಕೇಶನ್ ಆಕ್ಟ್" ಜಾರಿಗೆ ತಂದು ಶಿಕ್ಷಣಕ್ಕೆ ಪ್ರೋತ್ಸಾಹಿಸಲಾಯಿತು.

ವಸಾಹತುಶಾಹಿ ಅಭಿವೃದ್ಧಿ ಮಾದರಿಯು ಜನಪರವಾಗಿರಲಿಲ್ಲ. ವಸಾಹತು ಸರ್ಕಾರ ತಾನು ಆಡಳಿತ ನಡೆಸುತ್ತಿದ್ದ ಪ್ರದೇಶದಲ್ಲಿ ಸಾರಿಗೆ, ಸಂಪರ್ಕ, ಶಿಕ್ಷಣ ಕಂದಾಯ ವ್ಯವಸ್ಥೆ, ಪೋಲಿಸ್ ಮುಂತಾದ ಸಂಗತಿಗಳನ್ನು ವ್ಯವಸ್ಥಿತಗೊಳಿಸಿದರೂ ಸಹಾ ತೆರಿಗೆಗಳ ಮೂಲಕ ಜನರ ಶೋಷಣೆಗೆ ಸಂಪನ್ಮೂಲಗಳ ಲೂಟಿಯಿಂದ ಸಮಾಜದ ಶೋಷಣೆಗೆ ಅದು ಕಾರಣವಾಯಿತು. ಸಾಂಪ್ರದಾಯಕ ವೃತ್ತಿಗಳನ್ನು ನಾಶಪಡಿಸಿತು. ಉನ್ನತ ವರ್ಗದವರು, ಜಮೀನ್ದಾರರು, ಶಿಕ್ಷಣವನ್ನು ಪಡೆದವರು, ಅಭಿವೃದ್ಧಿಯ ಫಲಗಳನ್ನು ತಮ್ಮ ವಶಪಡಿಸಿಕೊಳ್ಳುತ್ತಿದ್ದರು. ಯಾವುದನ್ನು 'ಎಲೀಟ್ ಕ್ಯಾಪ್ಚರ್' ಎಂದು ಕರೆಯುತ್ತೇವೆಯೋ ಅದಕ್ಕೆ ವಸಾಹತುಶಾಹಿ ಆಡಳಿತ ಅವಕಾಶ ನೀಡಿತು.

## ಅಡಿಟಿಪ್ಪಣಿಗಳು

1. ಷೇಕ್ ಅಲಿ ಬಿ, (ಸಂ) ಸೆಬಾಸ್ಟಿಯನ್ ಜೊಸೆಫ್, ಕರ್ನಾಟಕ ಚರಿತ್ರೆ (ಸಂಪುಟ 6), ಪ್ರಸಾರಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 2018 ಪುಟ 152
2. ವಿರೂಪಾಕ್ಷಿ ಪೂಜಾರಹಳ್ಳಿ, ವಸಾಹತುಕಾಲೀನ ಬಳ್ಳಾರಿ ಜಿಲ್ಲೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, 2009 ಪುಟ 2
3. ಷೇಕ್ ಅಲಿ ಬಿ. (ಸಂ) ಕರ್ನಾಟಕ ಚರಿತ್ರೆ. ಪೂರ್ವೋಕ್ತ, ಪು 47
4. ಸುಂದರ ರಾಜಯ್ಯಂಗಾರ್, ಲ್ಯಾಂಡ್ ಟೆನ್ಯೂರ್ಸ್ ಇನ್ ಮದ್ರಾಸ್ ಪ್ರೆಸಿಡೆನ್ಸಿ. 1921 ಪುಟ 153
5. ಷೇಕ್ ಅಲಿ ಬಿ. (ಸಂ) ಕರ್ನಾಟಕ ಚರಿತ್ರೆ. ಪೂರ್ವೋಕ್ತ, ಪು 165
6. ಅದೇ, ಪು 167
7. ಅದೇ, ಪು 170–171
8. ಅದೇ, ಪು 172
9. ಪ್ರೊಸಿಡಿಂಗ್ಸ್ ಆಫ್ ಮದ್ರಾಸ್ ಬೋರ್ಡ್ ಆಫ್ ರೆವಿನ್ಯೂ ದಿ 23–02–1809 ಪುಟ 1214
10. ಚಂದ್ರಶೇಖರ್ ಎಸ್. ಮತ್ತು ಸುರೇಂದ್ರರಾವ್ (ಸಂ), ಕರ್ನಾಟಕದ ಸಾಮಜಿಕ ಮತ್ತು ಆರ್ಥಿಕ ಚರಿತ್ರೆಯ ಕೆಲವು ನೆಲೆಗಳು, (ಸಂಪುಟ 10), ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಬೆಂಗಳೂರು, 2016, ಪುಟಸಂಖ್ಯೆ 139–140
11. ಅದೇ ಪು 137